ಅನುಬಂಧ 17

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 3498 |
| ಸದಸ್ಯರ ಹೆಸರು | : | ಶ್ರೀ.ಬಿ.ಎಂ.ಎಲ್.ಕಾಂತರಾಜು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 14.11.2017 |
| ಉತ್ತರಿಸುವ ಸಚಿವರು | : | ಮಾನ್ಯ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು |

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರಾಷ್ಟ್ರೀಯ ಹೆದ್ದಾರಿ-4 ಕ್ಕೆ ಸೇರಿದಂತ ತುಮಕೂರು ನಗರ ಕ್ಯಾತಸಂದ್ರ ಬಳಿ ಸಾರ್ವಜನಿಕರು ರಸ್ತೆ ದಾಟಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ತೆಗೆದುಕೊಂಡಿರುವ ಕ್ರಮಗಳೇನು: (ವಿವರ ನೀಡುವುದು) | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ | ರಾಷ್ಟ್ರೀಯ ಹೆದ್ದಾರಿ-4 ಕ್ಕೆ ಹೊಂದಿಕೊಂಡಂತೆ ಶ್ರೀ ಸಿದ್ಧಗಂಗಾ ಮಠವಿದ್ದು, ಈ ಮಠಕ್ಕೆ ದೇಶ ವಿದೇಶಗಳಿಂದ ಅತಿ ಗಣ್ಯಾತಿ ಗಣ್ಯವ್ಯಕ್ತಿಗಳು ಭೇಟಿ ನೀಡುತ್ತಿದ್ದು, ಮಠಕ್ಕೆ ಹೋಗಲು ಕ್ಯಾತಸಂದ್ರ ಜಂಕ್ಷನ್‌ನಲ್ಲಿ ರಸ್ತೆ ದಾಟುವುದು ಕಷ್ಟಕರವಾಗಿರುವುದರಿಂದ ಜಂಕ್ಷನ್ ಮಠಕ್ಕೆ ಸಂಪರ್ಕ ನೀಡುವ 2ವೇ ಮಾರ್ಗದ ರೀತಿಯ ಮೇಲು ಸೇತುವೆ (ಫ್ಲೈಓವರ್) ನಿರ್ಮಾಣ ಮಾಡಲು ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳುವುದೆ. | ಕ್ಯಾತಸಂದ್ರ ಜಂಕ್ಷನ್ ಫ್ಲೈಓವರ್ ಕಾಮಗಾರಿಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಬರುತ್ತಿದ್ದು, ಈ ಹಿಂದೆ 2003 ರಲ್ಲಿ 6 ಲೇನ್ ಫ್ಲೈಓವರನ್ನು ಯೋಜಿಸಲಾಗಿದ್ದು, ಸಿದ್ದಗಂಗ ಮಠದ ವಿರೋಧದಿಂದ ಕಾಮಗಾರಿಯನ್ನು ಮುಂದೂಡಲಾಗಿದ್ದು, ಆದರೆ ಈಗ ನೆಲಮಂಗಲದಿಂದ (29.50 ಕಿಮೀ) ತುಮಕೂರಿಗೆ (75.00 ಕಿಮೀ) ಆರು ಪಥದ ರಸ್ತೆ ಅಭಿವೃದ್ಧಿ ಕಾಮಗಾರಿಯ ಯೋಜನಾ ವರದಿ ಪ್ರಗತಿಯಲ್ಲಿದ್ದು ಅದರಲ್ಲಿ ಕ್ಯಾಂತಸಂದ್ರ ಫ್ಲೈಓವರ್ ಕಾಮಗಾರಿಯನ್ನು ನಿರ್ಮಿಸಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಯೋಜಿಸಲಾಗಿದೆ. |
| ಇ | ಕಳೆದ ಹತ್ತಾರು ವರ್ಷಗಳಿಂದ ಈ ಕ್ಯಾತಸಂದ್ರ ಜಂಕ್ಷನ್‌ನಲ್ಲಿ ಹಲವಾರು ಅಪಘಾತಗಳು ನಡೆದು ಸಾರ್ವಜನಿಕರು ಪ್ರಾಣ ಕಳೆದುಕೊಂಡಿರುವ ಉದಾಹರಣೆ ಇರುವುದರಿಂದ, ಈ ಬಗ್ಗೆ ತಕ್ಷಣ ಒಂದು ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿ ಕೂಡಲೇ ಕಾಮಗಾರಿ ಪ್ರಾರಂಭಿಸಲಾಗುವುದೇ? | |

ಸಂಖ್ಯೆ: ಲೋಇ 619 ಸಿಎನ್‌ಹೆಚ್ 2017.

(ಡಾ: ಹೆಚ್.ಸಿ.ಮಹದೇವಪ್ಪ)
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಸಚಿವರು